## GOVERNMENT OF KARNATAKA

No. : DPAR 90 SKM 2022. Karnataka Government Secretariat,
Vidhana Soudha,
Bangalore, Dated :19.05.2022.

## NOTIFICATION

Whereas the draft of the Karnataka State Administrative Services (Recruitment) (Amendment) Rules, 2022 was published as required by clause (a) of sub-section (2) of section 3 read with section 8 of the Karnataka State Civil Services Act, 1978 (Karnataka Act 14 of 1990), in Notification No. DPAR 90 SKM 2022, dated: 13.04.2022 in part IVA of the Karnataka Gazette Extraordinary No., dated: 13.04.2022 inviting objections and suggestions from all persons likely to be effected thereby within fifteen days from the date of its publication in the official Gazette.

And whereas the said Gazette was made available to public on. 13.04.2022

And whereas the objections and suggestions received in this behalf have been considered by the Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby make the following rules, namely:-

## RULES

**1. Title and commencement.-** (1) These rules may be called the Karnataka State Administrative Services (Recruitment) (Amendment) Rules, 2022.

(2) They shall come into force from the date of their publication in the Official Gazette.

**2. Amendment of the Schedule.-** In the Karnataka State Administrative Services (Recruitment) Rules, 1957, in the Schedule,-

(1) in the category of post of 'KAS (super time scale)', at serial number (a2), in column (4), the following shall be inserted at the end, namely,-

"Provided that, as one time measure for the process of promotion from the date of commencement of the Karnataka State Administrative Services (Recruitment) (Amendment) Rules, 2022, must have put in a total service of not less than eleven years in the cadre of KAS (Junior Scale, Senior Scale and Selection Grade) of which not less than one year shall be in the cadre of KAS (Selection Grade).

**Note:**- On completion of the onetime process of promotion to the post specified in column (2) the provisions of the Karnataka State Administrative Services (Recruitment) (Amendment) Rules, 2022 shall cease to operate."

(2) in the category of post of 'KAS (selection grade)', at serial number (a3), in column (4), the following shall be inserted at the end, namely,-

"Provided that, as one time measure for the process of promotion from the date of commencement of the Karnataka State Administrative Services (Recruitment) (Amendment) Rules, 2022, must have put in a total service of not less than eight years in the cadre of KAS (Junior Scale and Senior Scale) of which not less than two years shall be in the cadre of KAS (Senior Scale)".

**Note:-** On completion of the onetime process of promotion to the post specified in column (2) the provisions of the Karnataka State Administrative Services (Recruitment) (Amendment) Rules, 2022 shall cease to operate.”

By Order and in the name of the
Governor of Karnataka,

(Umadevi)
Under Secretary to Government
Department of Personnel and
Administrative Reforms (Services-2)

<u>**ಕರ್ನಾಟಕ ಸರ್ಕಾರ**</u>

ಸಂಖ್ಯೆ: ಸಿಆಸುಇ 90 ಆಸೇವ 2022 ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:19.05.2022

<u>**ಅಧಿಸೂಚನೆ**</u>

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ ಸಂಖ್ಯೆ 1990 ರ 14) ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (2) ನೇ ಉಪಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2020ರ ಕರಡನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಈ ಸಂಬಂಧ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ:13.04.2022ರ ಕರ್ನಾಟಕ ರಾಜ್ಯ ವಿಶೇಷ ರಾಜ್ಯಪತ್ರ ಸಂ. ಭಾಗ IVಎರಲ್ಲಿ ದಿನಾಂಕ: 13.04.2022ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 90 ಎಸ್ ಕೆಎಂ 2022ರಲ್ಲಿ ಪ್ರಕಟಿಸಿದೆ.

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ದಿನಾಂಕ: 13.04.2022ರಂದು ಲಭ್ಯಗೊಳಿಸಿದೆ.

ಮತ್ತು ಈ ಸಂಬಂಧ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿದೆ.

ಆದ್ದರಿಂದ , ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದೆ., ಎಂದರೆ:-

**ನಿಯಮಗಳು**

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2022 ಎಂದು ಕರೆಯತಕ್ಕದ್ದು.

(2)ಇವು, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳು ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಅನುಸೂಚಿಯ ತಿದ್ದುಪಡಿ.-** ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) ನಿಯಮಗಳು, 1957ರ ಅನುಸೂಚಿಯಲ್ಲಿ,-

(1) (4) ನೇ ಕಾಲಂನಲ್ಲಿ (ಎ2) ಕ್ರಮಸಂಖ್ಯೆಯಲ್ಲಿನ ಕೆಎಎಸ್ (ಸೂಪರ್ ಟೈಂ ಸ್ಕೇಲ್)' ಹುದ್ದೆಯ ಪ್ರವರ್ಗದಲ್ಲಿ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2022ರ ಪ್ರಾರಂಭದ ದಿನಾಂಕದಿಂದ ಮುಂಬಡ್ತಿ ಪ್ರಕ್ರಿಯೆಗೆ ಒಂದು ಬಾರಿಯ ಕ್ರಮವಾಗಿ, ಕೆಎಎಸ್ (ಕಿರಿಯ ಶ್ರೇಣಿ, ಹಿರಿಯ ಶ್ರೇಣಿ ಮತ್ತು ಆಯ್ಕೆ ಶ್ರೇಣಿ) ವೃಂದದಲ್ಲಿ ಹನ್ನೊಂದು ವರ್ಷಗಳಿಗೆ ಕಡಿಮೆಯಿಲ್ಲದ ಒಟ್ಟು ಸೇವೆಯನ್ನು ಹೊಂದಿರತಕ್ಕದ್ದು ಅದರಲ್ಲಿ ಕೆಎಎಸ್ (ಆಯ್ಕೆ ಶ್ರೇಣಿ) ವೃಂದದಲ್ಲಿ ಒಂದು ವರ್ಷಕ್ಕೆ ಕಡಿಮೆಯಿಲ್ಲದ ಸೇವೆಯಿರತಕ್ಕದ್ದು.

**ಸೂಚನೆ:-** ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2022ರ ಉಪಬಂಧಗಳ (2)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗೆ ಮುಂಬಡ್ತಿ ಪ್ರಕ್ರಿಯೆಯಲ್ಲಿ ಒಂದು ಬಾರಿಯ ಕ್ರಮವು ಪೂರ್ಣಗೊಂಡ ಮೇಲೆ ಅದರ ಕಾರ್ಯಾಚರಣೆಯು ನಿಂತುಹೋಗತಕ್ಕದ್ದು."

(2) (4) ನೇ ಕಾಲಂನಲ್ಲಿ (ಎ3) ಕ್ರಮಸಂಖ್ಯೆಯಲ್ಲಿನ ಕೆಎಎಸ್ (ಆಯ್ಕೆ ಶ್ರೇಣಿ)' ಹುದ್ದೆಯ ಪ್ರವರ್ಗದಲ್ಲಿ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2022ರ ಪ್ರಾರಂಭದ ದಿನಾಂಕದಿಂದ ಮುಂಬಡ್ತಿ ಪ್ರಕ್ರಿಯೆಗೆ ಒಂದು ಬಾರಿಯ ಕ್ರಮವಾಗಿ ಕೆಎಎಸ್ (ಕಿರಿಯ ಶ್ರೇಣಿ ಮತ್ತು ಹಿರಿಯ ಶ್ರೇಣಿ) ವೃಂದದಲ್ಲಿ ಎಂಟು ವರ್ಷಗಳಿಗೆ ಕಡಿಮೆಯಿಲ್ಲದ ಒಟ್ಟು ಸೇವೆಯನ್ನು ಹೊಂದಿರತಕ್ಕದ್ದು ಅದರಲ್ಲಿ ಕೆಎಎಸ್ (ಹಿರಿಯ ಶ್ರೇಣಿ) ವೃಂದದಲ್ಲಿ ಎರಡು ವರ್ಷಗಳಿಗೆ ಕಡಿಮೆಯಿಲ್ಲದ ಸೇವೆಯಿರತಕ್ಕದ್ದು.

**ಸೂಚನೆ:-** ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2022ರ ಉಪಬಂಧಗಳ (2)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗೆ ಮುಂಬಡ್ತಿ ಪ್ರಕ್ರಿಯೆಯಲ್ಲಿ ಒಂದು ಬಾರಿಯ ಕ್ರಮವು ಪೂರ್ಣಗೊಂಡ ಮೇಲೆ ಅದರ ಕಾರ್ಯಾಚರಣೆಯು ನಿಂತುಹೋಗತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಉಮಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು.ಇ(ಸೇವೆಗಳು-2)